

# ದಿಶಾ ಹೊಸ ದಿಶೆ

ದಿಶಾ ಪಟಾನಿ ಬಾಲಿವುಡ್‌ನ ಹೊಸ ಸೆನ್ಸೇಷನ್. ಸದಾ ಸುದ್ದಿಯಲ್ಲಿರುವುದು ಹೇಗೆಂದು ಈ 'ಫ್ಯಾಷನ್ ಸುಂದರಿ'ಗೆ ಚೆನ್ನಾಗಿ ಗೊತ್ತಿದೆ. 26ರ ಈ ತರುಣಿ ಪ್ರತಿದಿನ ಎಂಬಂತೆ ಇನ್‌ಸ್ಟಾಗ್ರಾಮ್‌ನಲ್ಲಿ ತನ್ನ ಲಾವಣ್ಯ ಪ್ರದರ್ಶನ ನಡೆಸುತ್ತಿದ್ದಾಳೆ. ಬಿಕಿನಿ ಮತ್ತು ಡಾನ್ಸ್ ಭಂಗಿಗಳಲ್ಲಿ ಸದಾ ಮಿಂಚುವ ದಿಶಾ, ಇತ್ತೀಚೆಗೆ ಬಾಕ್ಸಿಂಗ್ ತಾನು ಕಲಿಯುತ್ತಿರುವುದನ್ನೂ ಬಹಿರಂಗ ಪಡಿಸಿದ್ದಾಳೆ. ಬಾಯ್‌ಫ್ರೆಂಡ್ ಟೈಗರ್ ಶ್ರಾಫ್ ಜೊತೆಗೆ 'ಬಾಗಿ–2'ನಲ್ಲಿ ಮಿಂಚಿದ ಬಳಿಕ ಈಕೆಗೆ ಬಾಕ್ಸಿಂಗ್ ಕ್ರೇಝ್ ಹೆಚ್ಚಿದೆಯಂತೆ. ಸಲ್ಮಾನ್ ಅಭಿನಯದ 'ಭಾರತ್' ಚಿತ್ರದಲ್ಲಿ ಕತ್ರೀನಾ ಜೊತೆಗೆ ಪೈಪೋಟಿಯಿಂದ ನಟಿಸಿರುವ ದಿಶಾ, ಜೂನ್‌ನಲ್ಲಿ ಆ ಚಿತ್ರ ಬಿಡುಗಡೆಯಾಗುವುದನ್ನೇ ಕಾಯುತ್ತಿದ್ದಾಳಂತೆ.



# ಕಣ್ಸನ್ನೆ ಸುಂದರಿ ವಿವಾದ

ಮಲಯಾಳಂನ 'ಒರು ಅಡಾರ್ ಲವ್' ಚಿತ್ರದ 'ಮಾಣಿಕ್ಯ ಮಲರಾಯ ಪೂವೆ..' ಹಾಡಿನಲ್ಲಿ ಕಣ್ಣು ಮಿಟುಕಿಸಿದ ಸುಂದರಿ ಪ್ರಿಯಾ ವಾರಿಯರ್ ಈಗ ಬಾಲಿವುಡ್ ಪ್ರವೇಶಿಸಿದ್ದಾಳೆ. ಹಾಡಿನಲ್ಲಿ ಈಕೆಯ ಕಣ್ಸನ್ನೆಯ ಪ್ರಭಾವ ಎಷ್ಟಿತ್ತೆಂದರೆ ಕಣ್ಣು ಮಿಟುಕಿಸುವುದರೊಳಗೆ ಈಕೆ ಮಲಯಾಳಂ ಚಿತ್ರರಂಗದಲ್ಲಿ ತಾರೆಯಾಗಿ ಬಿಟ್ಟಿದ್ದಳು. ದಕ್ಷಿಣದ ಯಾವುದೇ ಭಾಷೆಯ ಸಿನಿಮಾದಲ್ಲಿ ತಾರೆಯಾದರೆ ಸಾಕು, ಈಗ ಬಾಲಿವುಡ್ ಅವರನ್ನು ಕೈ ಬೀಸಿ ಕರೆಯುತ್ತದೆ. ಹಾಗೆಯೇ ರೋಹಿತ್ ಶೆಟ್ಟಿ ನಿರ್ದೇಶನದ 'ಸಿಂಬ' ಚಿತ್ರಕ್ಕೆ ಈಕೆಯೇ ನಾಯಕಿ ಎಂದು ಸುದ್ದಿ ಹಬ್ಬಿತ್ತು. ಆದರೆ ಅದೇನಾಯಿತೋ, ಚಿತ್ರಕ್ಕೆ ಸಾರಾ ಅಲಿ ಖಾನ್ ನಾಯಕಿ ಆಗಿ ಚಿತ್ರ ಯಶಸ್ವಿಯೂ ಆಯಿತು. ರಣ್‌ವೀರ್ ಸಿಂಗ್ ಜೊತೆಗೆ ಆ ಚಿತ್ರದಲ್ಲಿ ನಾಯಕಿಯಾಗಿ ಎಂಟ್ರಿ ಪಡೆದಿದ್ದರೆ ಬಹುಶಃ ಪ್ರಿಯಾ ಈಗಾಗಲೇ ಬಾಲಿವುಡ್‌ನ ಹಾಟ್ ನಟಿ ಆಗುತ್ತಿದ್ದಳೇನೋ!

ಆ ಅವಕಾಶ ತಪ್ಪಿದರೂ ಈಗ ಪ್ರಿಯಾಗೆ ಇನ್ನೊಂದು ಅವಕಾಶ ಬಂದಿದೆ. ಈ ಅವಕಾಶ ಆರಂಭದಲ್ಲೇ ವಿವಾದ ಸೃಷ್ಟಿಸಿದ್ದು, ಈಕೆಯ ಬಾಲಿವುಡ್ ಎಂಟ್ರಿಯನ್ನು ಭರ್ಜರಿಯಾಗಿಸುವ ಎಲ್ಲ ಸಾಧ್ಯತೆಗಳಿವೆ. ಚಿತ್ರದ ಹೆಸರು 'ಶ್ರೀದೇವಿ ಬಂಗಲೊ'. ಇದರಲ್ಲಿ ಪ್ರಿಯಾ ನಾಯಕಿ. ಚಿತ್ರದ ಟೀಸರ್ ಬಿಡುಗಡೆಯ ಬೆನ್ನಲ್ಲೇ ವಿವಾದ ಭುಗಿಲೆದ್ದಿದೆ. ಏಕಾಂಗಿ ಚಿತ್ರನಟಿಯೊಬ್ಬಳ ಕಥೆಯಿರುವ ಸಿನಿಮಾ ಇದು. ಟೀಸರ್‌ನಲ್ಲಿ ಈ ನಟಿ ಸಿಗರೇಟ್ ಸೇದುವುದು, ಶರಾಬು ಕುಡಿಯುವುದು ಮತ್ತು ಬಾತ್‌ಟಬ್‌ನಲ್ಲಿ ಮುಳುಗಿ ಸಾಯುವ ದೃಶ್ಯಗಳಿವೆ. ಈ ದೃಶ್ಯಗಳನ್ನು ನೋಡಿ ಸಿಟ್ಟಿಗೆದ್ದಿರುವ ನಿರ್ಮಾಪಕ ಬೋನಿ ಕಪೂರ್, ಕಾನೂನು ಕ್ರಮ ಕೈಗೊಳ್ಳುವುದಾಗಿ ಹೇಳಿ ಚಿತ್ರತಂಡಕ್ಕೆ ನೋಟಿಸ್ ಕಳಿಸಿದ್ದಾರೆ. 'ನನ್ನ ಹೆಂಡತಿ ಶ್ರೀದೇವಿಯನ್ನು ಅವಮಾನ ಮಾಡಲೆಂದೇ ಈ ಚಿತ್ರ ಮಾಡಲಾಗುತ್ತಿದೆ' ಎನ್ನುವುದು ಬೋನಿ ಆರೋಪ.

ಖ್ಯಾತ ಚಿತ್ರನಟಿ ಶ್ರೀದೇವಿ ದುಬೈಯಲ್ಲಿ ಬಾತ್‌ಟಬ್‌ನಲ್ಲಿ ಬಿದ್ದು ದುರಂತ ಸಾವನ್ನಪ್ಪಿದ್ದು ಇನ್ನೂ ಚಿತ್ರರಸಿಕರು ಮರೆಯದ ಸಂಗತಿ. ಪ್ರಿಯಾ ಮಾತ್ರ 'ನಟಿ ಶ್ರೀದೇವಿಗೂ, ಈ ಚಿತ್ರದ ಕಥೆಗೂ ಸಂಬಂಧ ಇಲ್ಲ' ಎಂದು ಸ್ಪಷ್ಟನೆ ನೀಡಿದ್ದಾಳೆ. 'ಟೀಸರ್ ಬಗ್ಗೆ ವಿವಾದ ಆಗಿದೆ ನಿಜ. ಆದರೆ ಶ್ರೀದೇವಿ ಮ್ಯಾಡಂಗೂ ಈ ಚಿತ್ರದ ಕಥೆಗೂ ಯಾವುದೇ ಸಂಬಂಧವಿಲ್ಲ. ಹಾಗಿದ್ದೂ ವಿವಾದ ಆಗುವುದಾದರೆ ಏನು ಮಾಡಲಾಗುತ್ತದೆ?' ಎನ್ನುವುದು ಪ್ರಿಯಾ ಪ್ರಶ್ನೆ. ಒಟ್ಟಾರೆ ಈ ವಿವಾದದಿಂದ ಪ್ರಿಯಾಗೆ ಭರ್ಜರಿ ಪ್ರಚಾರ ಸಿಗುವುದಂತೂ ಖಂಡಿತ.

■ ಬಿಂದು